ಅಧಿಕಾರವನ್ನು ಮಿಸ್-ಯೂಸ್ ಮಾಡುತ್ತಾರೆ. that becomes misconduct. When it becomes misconduct, it is very difficult for us to file a criminal complaint. For that reason we are interacting with the Law Department to facilitate filing a criminal prosecution. ಇನ್ನು ಎರಡನೆಯದಾಗಿ ಒಂದು ಹೆಜ್ಜೆ ಮುಂದೆ ಹೋಗಿ ಹೇಳುವುದಾದರೆ ನಾವು 285ನೇ ನಿಯಮದ ಕೆಳಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಇಂಥ ಪ್ರಕರಣಗಳಲ್ಲಿ ನಾವು ವಿಚಾರವನ್ನು ಮಾಡುತ್ತಿದ್ದೇವೆ. ಯಾವ ಕ್ರಮವನ್ನೂ ಕೂಡ ಬಿಡುವುದಿಲ್ಲ. ಎಲ್ಲಿ ಭ್ರಷ್ಟಾಚಾರದಲ್ಲಿ ಸಿಕ್ಕಿಹಾಕಿಕೊಂಡಿರತಕ್ಕಂಥ ಅಧಿಕಾರಿಗಳಿರುತ್ತಾರೋ ಅವರ ಮೇಲೆ ಕ್ರಿಮಿನಲ್ ಪ್ರಾಸಿಕ್ಯೂಶನ್‌ನ್ನು ನಾವು ತಕ್ಷಣ ಹೂಡುತ್ತೇವೆ.

ರಾಜ್ಯದಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ವಿದೇಶಿ ಪ್ರವಾಸದಿಂದಾದ ಖರ್ಚಿನ ವಿವರ

25 (410)

ಶ್ರೀ ಯು.ಆರ್.ಸಭಾಪತಿ (ಉಡುಪಿ): ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ. ರಾಜ್ಯದ ವಿವಿಧ ಹುದ್ದೆಗಳಲ್ಲಿರುವ ಐಎಎಸ್ ಹಾಗೂ ಐಪಿಎಸ್ ಅಧಿಕಾರಿಗಳು 1999-2000 ಸಾಲಿನಲ್ಲಿ ನಡಸಿದ ವಿದೇಶ ಪ್ರಯಾಣದ ವಿವರಗಳನ್ನು ತಿಳಿಸುವಿರಾ.

ಆ. ಈ ವಿದೇಶ ಪ್ರಯಾಣಕ್ಕೆ ರಾಜ್ಯ ಸರ್ಕಾರದಿಂದ ಖರ್ಚಾದ ಹಣವೆಷ್ಟು (ವಿವರಗಳನ್ನು ನೀಡುವುದು)

ಶ್ರೀ ಎಸ್.ಎಂ.ಕೃಷ್ಣ (ಮುಖ್ಯ ಮಂತ್ರಿಗಳು):

ಅ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

ಆ. ವಿವರಗಳನ್ನು ಅನುಬಂಧದಲ್ಲಿ ನೀಡಲಾಗಿದೆ.

SL. N0.	NAME & ADRDRESS	CADRE	PURPOSE OF VIST	EXPENDITURE MET BY
1	2	3		4 5
1	RAMALINGAM RAMASESHAN FINANCE DIRECTOR KPC LTD.,	IAS	FOR EVALUATING EPC BID FOR POWER PROJECTS	KPCL RS. 3,16,337,75/-
2	CHANDRASHEKAR.C DIRECTOR KARNATAKA POLICE ACADEMY MYSORE	IPS	TO PARTICIPATE IN THE 13TH SYMPOSIUM OF HEADS OF POLICE COLLEEGES TO BE HELD AT IYONS FRANCE	GOVT.OF KARNATAKA RS. 1.16,592/-
3	SRIVASTAVA K.N MD, THE HUTTI GOLD MINES LTD	IAS	TO PARTICIPATE "GOLD MINING IN KARNATAKA REGION ON INVESTMENT OPPORTUNITIES IN INDIA MINING 1999"	HGML RS.23,177/-

4	PRASAD D.V MD, KOF	IAS	TO PARTICIPATE AND ATTEND IN THE AMERICAN OIL CHEMISTS SOCY. MALAYSIAN PALM OIL RESEARCH INSTT, & 5TH ANNUAL ASIA EDIBLE OIL MARKET 1999	KOF RS.2,05,788/-
5	VIJAY SASNUR IGP & IG OF PRISIONS BANGALORE	IPS	ON A STUDY TOUR TO UK UNDER THE PROJECT ON "HUMAN RIGHTS & PRISION MANAGEMENT"	GOVT OF KARNATAKA RS 27,704
6	VISWANATHAN .N PRINCIPAL SECY. TO GOVT C&I INDUSTRIES DEPTT	IAS	AS A LEADER OF THE FKCCI DELEGATION	GOVT.OF.KARNATAKA RS.1,11,430/-
7	VINAY LUTHRA EX.DIRECTOR, JUNGLE LODGES & RESORTS LTD	IFS	TO PARTICIPATE IN THE PATA TRAVEL MART.	MET BY JUNGLE LODGES

8	JAIRAJ K MD. KPC LTD.,	IAS	TO PARTICIPATE IN HYDRO POJECTS AND ALSO TO OFFER ENGINEERING EXPERTISE FOR OVERSEAS PROJECT	MET BY KPCL
9	K.P.SINGH, CHAIRMAN KEB	IAS	TO PARTICIPATE IN THE EXECUTIVE EXCHANGE PROGRAMME UNDER USEA/USAID	MET BY USEA AND KEB
10	TERESA BHATTACHARYA ACS AND DEVELOPEMENT COMMISSIONER	IAS	TO PARTICIPATE IN THE DISCUSSIONS AND CONFERENCE AT USA	MET FROM THE TECHNICAL CONSULTANCE FUND OF DFID
11	ABHAY PRAKASH, PRINICPAL SECRETARY TO GOVERNMENT A & H DEPARTMENT	IAS	TO PARTICIPATE IN THE DISCUSSIONS AND CONFERENCE AT USA	MET FROM THE TECHNICAL CONSULTANCE FUND OF DFID

12	B.K.BHATTACHARYA. CHIEF SECRETARY TO GOVT	IAS	TO PARTICIPATE IN THE INTERNATIONAL SEMINAR ON INTERNATIONAL WATER LAW AND POLICY AT UK	MET BY THE STATE GOVT RS 2,75,932/-
13	G.LATHA KRISHNARAU DIRECTOR, P&E, KSRTC	IAS	TO PARTICIPATE IN THE 53RD INTERNATIONAL UNION OF PUBLIC TRANSPORT AT CANADA	MET BY THE ASSOCIATION OF STATE ROAD TRANSPORT UNDERTAKING, ASRTU
14	N.GOKULRAM MANAGING DIRECTOR, KSRTC	IAS	TO PARTICIPATE IN THE 53RD INTERNATIONAL UNION OF PUBLIC TRANSPORT AT CANADA	MET BY THE ASSOCIATION OF STATE ROAD TRANSPORT UNDERTAKING, ASRTU

15	P.KOTILINGANGOUD MANAGING DIRECTOR KSSIDC	IAS	TO PARTICIPATE IN CONFERENCE REGARGING SHARE OF EXPERIENCE OF THE GROWTH OF SMALL SCALE INDUSTRIES	MET BY KSSIDC
16	KAUSHIK MUKHERJEE EXECUTIVE DIRECTOR KAWAD SOCIETY	IAS	TO VIST DFID OFFICES AND PARTICIPATE IN THE DISCUSSIONS AND CONFERENCE AT UK	MET BY KAWAD SOCIETY
17	SMT TERESA BHATTACHARYA, ADDL.CS & DEVELOPMENT COMMR	IAS	TO VISIT DFID OFFICES AND PARTICAPATE IN THE DISCUSSIONS AND CONFERENCE AT UK	MET BY KAWAD SOCIETY

18	BULLA SUBBARAO, CHAIRMAN AND MD, HUTTI GOLD MINES	IAS	TO PARTICIPATE IN MEETING OF THE WORLD GOLD COUNCIL AT LONDON	MET BY HGML & WORLD GOLD COUNCIL
19	V.P.BALIGAR, COMMISSIONER FOR ID & DIRECTOR OF INDUSTRIES AND COMMERCE	IAS	TO PARTICIPATE IN THE SOUTH INDIA TRADE EXHIBITION AT SRILANKA	MET OUT OF THE FUNDS OF VISVESWARAIAH INDUSTRIAL TRADE CENTRE
20	N.VISHWANATHAN, PRINCIPAL SECRETARY C &I DEPARTMENT	IAS	TO STUDY THE AIRPORT OF SINGPORE	MET BY THE FUNDS OF KSIIDC
21	P.S.KHAROLA, MD, BANGALORE METROPOLITAN TRANSPORT CORPORATION	IAS	TO STUDY THE WORKING OF MODERN BUS BASED PUBLIC TRANSPORT SYSTEM ETC IN SWEDEN	MET BY (SIDA) SWEEDISH INTERNATIONAL DEVELOPMENT AGENCY

22	SMT.TARA AJAI SINGH SECRETARY TO GOVERNMENT (TRANSPORT) HOME & TRANSPORT DEPARTMENT	IAS	TO STUDY THE WORKING OF MODERN BUS BASED PUBLIC TRANSPORT SYSTEM ETC IN SWEDEN	MET BY (SIDA) SWEEDISH INTERNATIONAL DEVELOPMENT AGENCY
23	B.K.DAS. CHAIRMAN AND MANAGING DIRECTOR KSIIDC	IAS	TO VISIT SINGAPORE AND HONGKONG TO STUDY MODERN AIRPORTS	MET BY KSIDC
24	S.K.PATTANAYAK SECRETARY TO GOVERNEMENT, FEE DEPT	IAS	TO PARTICIPATE IN THE STUDY MEETING OF ENVIRONMENTAL MANAGEMENT AT THAILAND	MET BY ASIAN PRODUCTIVITY ORGANISATION

25	PHILPOSE MATHAI, PRINCIPAL SECRETARY TO GOVT.UD DEPT	IAS	FOR HOLDING NOGOTIATIONS REGARDING KUDCEMP AT MANILA PHILLIPINES	MET BY ADB
24	C.GOPALA REDDY, PRINCIPAL SECRETARY TO GOVT FINANCE DEPARTMENT	IAS	FOR HOLDING NEGOTIATIONS REGARDING KUDCEMP AT MANILA PHILLIPINES	MET BY ADB
27	DR.A.RAVINDRA, MANAGING DIRECTOR, KARNATAKA URBAN INFRASTRUCTURE DEVELOPMENT AND FINANCE CORPORATION	IAS	FOR HOLDING NEGOTIATIONS REGARDING KUDCEMP AT MANILA PHILLPINES	MET BY ADB

28	DR.RENUKA VISWANATHAN PRINCIPAL SECRETARY TO GOVT., PLANNING DEPARTMENT	IAS	TO PARTICIPATE IN UNDP PROGRAMME AT JAPAN	MET BU UNDP
29	SANJAY DAS GUPTA SECRETARY, INFORMATION TECHNOLOGY	IAS	AS A MEMBER OF GOVERNMENT OF INDIA DELEGATION TO STUDY INFORMATION TECHNOLOGY SERVICES	MET BY STATE GOVERNMENT
30	SMT USHA GANESH SECRETARY TO GOVERNMENT, ITY DEPT	IAS	TO PARTICIPATE IN THE 35TH ANNUAL CONVENTION AT KATHMANDU NEPAL	MET OUT OF THE FUNDS OF JUNGLE LODGES AND RESORTS LIMITED

31	S.L.GANGADHARAPPA CHAIRMAN AND MD, MPM LTD	IAS	FOR DISCUSSIONS WITH COMMON WEALTH DEVEOPMENT CORPORATION AT UK	MET BY MPM LTD
32	V.P.BALIGAR, COMMISSIONER FOR ID & DIRECTOR OF INDUSTRIES AND COMMERCE	IAS	STUDY TOUR TO PARIS, VIENA, HUNGARY	MET BY UNIDO
33	M.K.SHANKARLINGE GOWDA ADDITIONAL SECRETARY TO CM	IAS	TO ATTEND THE BOARD MEETING OF ITPL	MET BY ITPL
34	SIDDAIAH, EXECUTIVE MEMBER, KIADB	IAS	TO ATTEND THE BOARD MEETING OF ITPL	MET BY ITPL

35	C.H.GOVINDA BHAT DIRECTOR, PPMU AND EX-OFFICIO ADDITIONAL SECRETARY, RDPR DEPT	IAS	TO ATTEND THE CONFERENCE ON ASIA TOOLS FOR MONITORING AND BENCH MARKING FOR SUSTAINABILITY AND EFFICIENCY AT THAILAND	MET BY UNDP, WORLD BANK AND WSP SA
36	A.SENGUPTA PRINICPAL SECRETARY TO GOVT. H & FW DEPT	IAS	TO PARTICIPATE IN THE WHO ORGANISED STUDY TOUR TO THAILAND AND BANGLADESH	MET BY WHO
37.	DR.S.SUBRMANYA PROJECT STATE AIDS PREVENTION SOCIETY AND EX-OFFICIAO SPECIAL SECRETARY TO GOVT H & FW DEPT	IAS	TO PARTICIPATE IN THE 5TH INTERNATIONAL CONGRESS ON AIDS IN ASIA AND THE PACIFIC AT MALAYSIA	MET BY DFID

38	N.C.MUNIYAPPA, DIRECTOR OF WOMEN AND CHILD DEVELOPMENT	IAS	TO PARTICIPATE IN THE AUS-AID ORGANISED TRAINING AT BANGLADESH INDONESIA AND AUSTRALIA	MET BY AUS-AID
39	S.K.PATTANAYAK SECRETARY TO GOVT ECOLOGY AND ENIVIRONMENT) FEE DEPT	IAS	TO PARTICIPATE IN THE CONFERENCE ON SITING OF INDUSTRIES AND EXECUTIVE INFORMATION VISIT TO GERMANY	MET BY GTZ OF GERMANY
40	B.S.PATIL, PRINICPAL SECRETARY TO GOVT. C & I DEPT	IAS	ACCOMPANIED THE HON'BLE CM TO VISIT SWITZERLAND AND UK TO PARTICIPATE IN THE WORLD ECONOMIC FORUM MEETING	MET BY STATE GOVERNMENT RS 1,26,060/-

41	C.K.NEELAKANTA RAJ CHAIRMAN AND MD KSIIDC	IAS	ACCOMPANIED THE HON'BLE CM TO VISIT SWITZERLAND AND UK TO PARTICIPATE IN THE WORLD ECONOMIC FORUM MEETING	MET BY KSIIDC RS. 3,22,160/-
42	S.V.RANAGANATH, SECRETARY TO CM	IAS	ACCOMPANIED THE HON'BLE CM TO VISIT SWITZERLAND AND UK TO PARTICIPATE IN THE WORLD ECONOMIC FORUM MEETING	MET BY STATE GOVERNMENT RS. 1,61,881/-
43	R.SRIKUMAR, DIRECTOR, S&V KSRTC	IPS	TO PARICIPATE IN THE AMERICAN PUBLIC TRANSIT ASSOCIATION FAIR COLLECTION WOREK AT USA	MET BY KSRTC

44	BIPIN GOPALA KRISHNA DIRECTOR, S&V, BMTC	IPS	TO STUDY THE WORKING OF MODERN BUS BASED PUBLIC TRANSPORT SYSTEM IN SWEDEN AND BRAZIL	MET BY SWEDISH INTERNATIONAL DEVELOPMENT AGENCY
45	KHALEEL-UR-REHMAN, DIGP HEADQUARTERS	IPS	TO ATTEND 3RD SEMINAR ON ADVANICING SCIENTIFIC INVESTIGATION OF CRIME AT UK	MET BY STATE GOVERNMENT
46	DR. D.V.GURUPRASAD DIRECTOR R & T, KSRTC	IPS	TO PARTICPATE IN THE CITY TRANS ASIA AT SINGAPORE	MET BY KSRTC

ಶ್ರೀ ಯು.ಆರ್.ಸಭಾಪತಿ: ಮಾನ್ಯ ಅಧ್ಯಕ್ಷರೆ, 1999-2000ನೇ ಸಾಲಿನಲ್ಲಿ ವಿದೇಶ ಪ್ರವಾಸ ಮಾಡಿದ ಐ.ಎ.ಎಸ್. ಹಾಗೂ ಐ.ಪಿ.ಎಸ್. ಅಧಿಕಾರಿಗಳ ವಿವರವನ್ನು ನಾನು ಕೇಳಿದ್ದೆ. ಸರ್ಕಾರ ಕೊಟ್ಟಿರುವ ಉತ್ತರದಲ್ಲಿ ಕೆಲವು ಐ.ಎ.ಎಸ್. ಅಧಿಕಾರಿಗಳು ವಿದೇಶಕ್ಕೆ ಹೋಗಿ ಬಂದದ್ದರ ವಿವರದೊಡನೆ ಖರ್ಚು ವೆಚ್ಚವನ್ನು ಕೊಟ್ಟಿದ್ದಾರೆ. ಆದರೆ ಉಳಿದವರ ಬಗ್ಗೆ ಖರ್ಚು ವೆಚ್ಚದ ವಿವರವನ್ನು ಕೊಟ್ಟಿಲ್ಲ. ಆ ವಿವರದ ಬದಲು ಆ ಕಾಲಂನಲ್ಲಿ ಎಕ್ಸ್‌ಪೆಂಡಿಚರ್ ಮೆಟ್ ಬೈ ಎಂದು ಹೇಳಿಬಿಟ್ಟಿದ್ದಾರೆ. ಆದುದರಿಂದ, ನಮಗೆ ಸಂಪೂರ್ಣ ವಿವರ ಸಿಗುತ್ತದೆಯೇ? ಇನ್ನು ಎರಡನೆಯದಾಗಿ ಕಳೆದ ಸಾಲಿನಲ್ಲಿ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ವಿದೇಶ ಪ್ರವಾಸದ ಬಗ್ಗೆ ಪ್ರಶ್ನೆಯನ್ನು ಹಾಕಿದಾಗ ಉತ್ತರದಲ್ಲಿ ಆ ವರ್ಷದಲ್ಲಿ 135 ಐ.ಎ.ಎಸ್. ಅಧಿಕಾರಿಗಳು ವಿದೇಶಿ ಪ್ರವಾಸ ಮಾಡಿ ಸುಮಾರು 11 ಕೋಟಿ ರೂಪಾಯಿಗಳನ್ನು ಖರ್ಚು ಮಾಡಲಾಗಿದೆಯೆಂದು ಹೇಳಲಾಗಿತ್ತು. ಪ್ರತಿ ವರ್ಷ ಕೇವಲ ಐ.ಎ.ಎಸ್. ಮತ್ತು ಐ.ಪಿ.ಎಸ್. ಅಧಿಕಾರಿಗಳ ವಿದೇಶ ಪ್ರವಾಸಕ್ಕೆ ಕೋಟ್ಯಾಂತರ ರೂಪಾಯಿಗಳು ಖರ್ಚು ಆಗುತ್ತಿದೆ. ಇದರಿಂದಾಗಿ ಸರ್ಕಾರಕ್ಕೆ ಏನು ಪ್ರಯೋಜನವಾಗಿದೆ ಎಂದು ತಿಳಿಸುತ್ತಾರೆಯೇ?

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ಮಾನ್ಯ ಅಧ್ಯಕ್ಷರೆ, ಐ.ಎ.ಎಸ್. ಮತ್ತು ಇತರ ಅಧಿಕಾರಿಗಳು ವಿದೇಶ ಪ್ರವಾಸ ಹೋಗಿರುವ ವಿವರವನ್ನು ಮಾನ್ಯ ಸದಸ್ಯರಿಗೆ ಒದಗಿಸಿಕೊಡಲಾಗಿದೆ. ಅವರು ಯಾವ ಕಾರಣಕ್ಕೋಸ್ಕರ ವಿದೇಶಕ್ಕೆ ಹೋದರು, ಅವರು ವಿದೇಶಕ್ಕೆ ಹೋದಂಥ ಕಾಲದಲ್ಲಿ ಅವರ ಖರ್ಚು ವೆಚ್ಚವನ್ನು ಯಾವ ಸಂಸ್ಥೆ ಭರಿಸಿತು ಎನ್ನತಕ್ಕಂಥ ವಿವರಣೆಯನ್ನು ಕೂಡ ಮಾನ್ಯ ಸದಸ್ಯರಿಗೆ ಒದಗಿಸಿಕೊಟ್ಟಿದ್ದೇವೆ. ಈ ಸರ್ಕಾರದ ಒಂದು ನಿಲುವು ಏನೆಂದರೆ ಅಧಿಕಾರಿಗಳು ಮತ್ತು ಸಚಿವರುಗಳು ವಿದೇಶ ಪ್ರವಾಸ ಅವಶ್ಯಕವಾಗಿ ಮಾಡಲೇಬೇಕಾದ ಕಾಲದಲ್ಲಿ ಮಾತ್ರ ಅದಕ್ಕೆ ಅವಕಾಶ ಒದಗಿಸಿಕೊಡಬೇಕು, ಇಲ್ಲದಿದ್ದರೆ ಅದನ್ನು ತಿರಸ್ಕರಿಸಬೇಕು ಎನ್ನತಕ್ಕಂಥ ನಿಲುವನ್ನು ನಾವು ತೆಗೆದುಕೊಂಡಿದ್ದೇವೆ.

ಶ್ರೀ ಯು.ಆರ್.ಸಭಾಪತಿ: ಇಷ್ಟೊಂದು ಅಧಿಕಾರಿಗಳು ವಿದೇಶ ಪ್ರವಾಸ ಮಾಡಿರುವುದರಿಂದ ಸರ್ಕಾರಕ್ಕೆ ಏನಾದರೂ ಲಾಭವಾಗಿದೆಯೇ? ಏಕೆಂದರೆ ಯಾವ ಅಧಿಕಾರಿ ಯಾವ ಖಾತೆಯಲ್ಲಿರುತ್ತಾನೆ ಆ ಖಾತೆಗೆ ಸಂಬಂಧಪಟ್ಟಂತೆ ಸೆಮಿನಾರ್‌ಗೆ ವಿದೇಶ ಪ್ರವಾಸ ಮಾಡುತ್ತಾನೆ, ಆದರೆ ಅವನು ಬಂದನಂತರ ಬೇರೆ ಖಾತೆಗೆ ವರ್ಗವಾಗಿರುತ್ತಾನೆ. ಆತ ಆ ಬೇರೆ ಖಾತೆಯಲ್ಲೂ ಕೂಡ ಆ ಖಾತೆಗೆ ಸಂಬಂಧಪಟ್ಟಂತೆ ಸೆಮಿನಾರ್‌ಗೆಂದು ವಿದೇಶ ಪ್ರವಾಸ ಕೈಗೊಳ್ಳುತ್ತಾನೆ. ಇದರಿಂದ ಉಪಯೋಗವೇನಾಗಿದೆ. ಕೇವಲ ವಿದೇಶ ಪ್ರವಾಸಕ್ಕೋಸ್ಕರ ಕೋಟ್ಯಾಂತರ

ರೂಪಾಯಿಗಳನ್ನು ಖರ್ಚು ಮಾಡಿ ಒಂದು ರೀತಿಯಲ್ಲಿ ಬಿಳಿಯಾನೆಯನ್ನು ಸಾಕಿದ ರೀತಿಯಾಗುತ್ತದೆಂದು ಹೇಳಬಯಸುತ್ತೇನೆ. ಇದನ್ನು ನಿಗ್ರಹ ಮಾಡುವುದಕ್ಕೆ ಕಠಿಣ ಕ್ರಮಗಳನ್ನು ಸರ್ಕಾರ ತೆಗದುಕೊಂಡಿದೆಯೇ? ಇನ್ನು ಮತ್ತೊಂದು ವಿಷಯವನ್ನು ಹೇಳಬಯಸುವುದೇನೆಂದರೆ ಇಂದು ಮಾಹಿತಿ ತಂತ್ರಜ್ಞಾನದ 21ನೇ ಸಹಸ್ರಮಾನಕ್ಕೆ ಕಾಲಿಟ್ಟಿದ್ದೇವೆ. ನಮ್ಮ ಸರ್ಕಾರದ ನಿಲುವನ್ನು ಆಡಳಿತದಲ್ಲಿ ಕಾರ್ಯರೂಪಕ್ಕೆ ತರಬೇಕಾದರೆ ಶಾಸಕರಾದ ನಮಗೂ ಅನುಭವ ಆಗಬೇಕಾಗುತ್ತದೆ. ನಮಗೂ ಕೂಡ ವಿದೇಶದಲ್ಲಿ ಆಡಳಿತ ಯಂತ್ರ ಯಾವ ರೀತಿಯಲ್ಲಿ ಬೆಳಗಿದೆ ಎಂಬ ವಿಚಾರದಲ್ಲಿ ತರಬೇತಿಯ ಅವಶ್ಯಕತೆ ಇದೆ. ಆದುದರಿಂದ ಈ ಅನುಭವವನ್ನು ಪಡೆಯುವ ಸಲುವಾಗಿ ಎಲ್ಲಾ ಶಾಸಕರಿಗೂ ವಿದೇಶ ಪ್ರವಾಸಕ್ಕೆ ಹೋಗಲು ಸರ್ಕಾರ ಖರ್ಚುವೆಚ್ಚವನ್ನು ಭರಿಸುತ್ತದೆಯೆ ಎಂಬ ಬಗ್ಗೆ ತಿಳಿಸಬೇಕು.

ಶ್ರೀ ಎಸ್.ಎಂ.ಕೃಷ್ಣ: ಅಧಿಕಾರಿಗಳು ವಿದೇಶ ಪ್ರವಾಸ ಮಾಡುವುದರಿಂದ ರಾಜ್ಯಕ್ಕೆ ಏನು ಲಾಭವಾಗುತ್ತಿದೆ ಎನ್ನುವುದರ ಬಗ್ಗೆ ಅದು ಪ್ರತಿಯೊಬ್ಬ ಅಧಿಕಾರಿಯು ಮಾಡತಕ್ಕಂಥ ಉದ್ದೇಶದಲ್ಲಿ ಅಡಕವಾಗಿರತಕ್ಕಂಥ ವಿಚಾರ. ಅದನ್ನು ಕ್ವಾಂಟಿಫೈ ಮಾಡುವುದಕ್ಕೆ ಬರುವುದಿಲ್ಲ. ಯಾವ ಅಧಿಕಾರಿ ವಿದೇಶಕ್ಕೆ ಹೋಗಿದ್ದರಿಂದ ಯಾವ ಪ್ರಮಾಣದಲ್ಲಿ ಅನುಕೂಲವಾಯಿತು ಎಂದು ಹೇಳುವುದಕ್ಕೆ ಬರುವುದಿಲ್ಲ. ಕೆಲವು ಮ್ಯಾನ್‌ಡೇಟರ್ ವಿಸಿಟ್ಸ್ ಆಗಬೇಕಾಗಿರುತ್ತದೆ. ಕೆಲವು ಆಹ್ವಾನಗಳು ಅಧಿಕಾರಿಗಳಿಗೆ ಬಂದಿರುತ್ತದೆ. ಆ ಇನ್‌ವಿಟೇಶನ್ ಜೊತೆಗೆ ಆಗತಕ್ಕಂಥ ಖರ್ಚುವೆಚ್ಚವನ್ನೂ ಕೂಡ ನಾವೇ ನೋಡಿಕೊಳ್ಳುತ್ತೇವೆಂದು ಹೇಳಿ ಆಹ್ವಾನ ನೀಡಿರುತ್ತಾರೆ. ಅಂತಹ ಕೇಸ್‌ಗಳಲ್ಲಿ ನಾವು ಸ್ವಲ್ಪ ಧಾರಾಳವಾಗಿ ಇರಬೇಕು. ಆದರೆ ರಾಜ್ಯ ಸರ್ಕಾರವೇ ಖರ್ಚು ಮಾಡತಕ್ಕಂತಹ ವಿಚಾರದಲ್ಲಿ ನಾವು ಸ್ವಲ್ಪ ಬಿಗಿಯಾಗಿರಬೇಕು. ಮಾನ್ಯ ಶಾಸನಸಭಾ ಸದಸ್ಯರಿಗೂ ಅಗತ್ಯವಾದ, ಮುಖ್ಯವಾದ ವಿಷಯಗಳಿವೆ, ವಿದೇಶಗಳಿಗೆ ಹೋಗಬೇಕಾದರೆ ಅವರಿಗೆ ಬೇಕಾದ ಪಾಸ್‌ಪೋರ್ಟ್‌ಗಳನ್ನು ಮಾಡಿಸಿಕೊಡುತ್ತೇವೆ. ಯಾವ ಯಾವ ದೇಶಗಳಿಗೆ ಅವರು ಹೋಗಬೇಕೆಂದು ಇಷ್ಟಪಡುತ್ತಾರೆ ಅಲ್ಲಿಗೆ ಹೋಗಬಹುದು. ಮಾಹಿತಿ ತಂತ್ರಜ್ಞಾನ ಸ್ವೀಡನ್‌ನಲ್ಲಿ ಬಹಳ ಮುಂದುವರೆದಿದೆ. ಆದ್ದರಿಂದ, ಸಭಾಪತಿಯವರಿಗೆ ಸ್ವೀಡನ್‌ನಿಂದ ವೀಸಾ ತರಿಸಿಕೊಡುತ್ತೇವೆ. ಪಾಸ್‌ಪೋರ್ಟ್ ತರಿಸಿಕೊಡುತ್ತೇವೆ. ಕೇಂದ್ರ ಸರ್ಕಾರದವರು ಪ್ರತಿಯೊಬ್ಬ ಶಾಸನಸಭಾ ಸದಸ್ಯರಿಗೆ, ಪಾರ್ಲಿಮೆಂಟ್ ಸದಸ್ಯರಿಗೆ ಇಂತಿಷ್ಟು ಎಂದು ಫಾರಿನ್ ಎಕ್ಸ್‌ಛೇಂಜನ್ನು ಈ ದೃಷ್ಟಿಯಿಂದ ಇಟ್ಟುಕೊಂಡಿದ್ದಾರೆ. ಅದರ ಪೂರ್ಣ ಲಾಭವನ್ನು ಮಾನ್ಯ ಗೌರವಾನ್ವಿತ ಶಾಸನಸಭಾ ಸದಸ್ಯರೂ ಪಡೆಯಬೇಕೆಂದು ಅವರು ಏನು ಸೂಚನೆ ಮಾಡಿದ್ದಾರೆ ಅದನ್ನು ನಾನು ಒಪ್ಪುತ್ತೇನೆ.

ಶ್ರೀ ಎನ್.ಯೋಗೀಶ್‌ಭಟ್: ಸನ್ಮಾನ್ಯ ಅಧ್ಯಕ್ಷರೆ, ಉತ್ತರ ಕೊಡುವಾಗ ಕೆಲವು ವ್ಯಕ್ತಿಗಳ ಬಗ್ಗೆ ಮಾತ್ರ ಪೂರ್ತಿ ವಿವರ ಕೊಟ್ಟಿದ್ದಾರೆ. ನಾನು ಏಷಿಯನ್ ಡೆವಲಪ್‌ಮೆಂಟ್ ಬ್ಯಾಂಕ್, ವರ್ಲ್ಡ್ ಬ್ಯಾಂಕ್ ಬಗ್ಗೆ ಚರ್ಚೆ ಮಾಡುತ್ತಿಲ್ಲ. ಅದರ ಖರ್ಚಿನ ಬಗ್ಗೆ ಕೇಳುತ್ತಿಲ್ಲ. ಉದಾಹರಣೆಗೆ ಆರ್.ಸಿ. ಕುಮಾರ್, ಡೈರೆಕ್ಟರ್ ಆಫ್ ಕೆಎಸ್‌ಆರ್‌ಟಿಸಿ, met by K.S.R.T.C ಎಂದು ಕೊಟ್ಟಿದ್ದಾರೆ. ಅಲ್ಲಿ ವಿವರ ಕೊಟ್ಟಿಲ್ಲ. ಖಲೀಲುರ್‌ರಹಮಾನ್ ಅವರ ಖರ್ಚು ಎಷ್ಟು ಎಂದು ಉಲ್ಲೇಖ ಮಾಡಲಿಲ್ಲ. ಕೆಲವರದ್ದು ಮಾತ್ರ ಕೊಟ್ಟಿದ್ದೀರಿ. ಉಳಿದವರದ್ದು ಸ್ಟೇಟ್ ಗವರ್ನಮೆಂಟ್ ಮತ್ತು ಸ್ಥಳೀಯ ಸಂಸ್ಥೆಗಳಿಂದ ಹೋದವರು, ನಿಗಮಗಳಿಂದ ಹೋದವರ ಬಗ್ಗೆ ಏಕೆ ವಿವರ ಕೊಡಲಿಲ್ಲ?

ಶ್ರೀ ಎಸ್.ಎಂ.ಕೃಷ್ಣ: ಉತ್ತರ ಪೂರ್ಣ ಮಾಹಿತಿಗಳನ್ನು ಒಳಗೊಂಡಂತಿಲ್ಲ ಎನ್ನತಕ್ಕಂಥ ರಿಸರ್ವೇಷನ್ ತಮ್ಮನ್ನು ಕಾಡುತ್ತಿದೆ ಎಂದು ನಾನು ಅರ್ಥ ಮಾಡಿಕೊಂಡಿದ್ದೇವೆ. ಕಳೆದ ಐದು ವರ್ಷಗಳಲ್ಲಿ ಎಷ್ಟು ಜನ ಮಂತ್ರಿಗಳು, ಎಷ್ಟು ಜನ ಅಧಿಕಾರಿಗಳು ಎಷ್ಟೆಷ್ಟು ಸಾರಿ ವಿದೇಶಗಳಿಗೆ ಹೋಗಿ ಬಂದರು, ಎಷ್ಟು ಖರ್ಚಾಯಿತು ಎಂಬ ಬಗ್ಗೆ ವರದಿಯನ್ನು ಸಂಗ್ರಹಿಸಿ ಸಭೆಯ ಮುಂದೆ ಮಂಡಿಸುತ್ತೇನೆ.

ಶ್ರೀ ಎ.ರಾಮದಾಸ್: 1992-2000 ಇಸವಿಯಲ್ಲಿ ಹೋದ ಐಎಎಸ್ ಅಧಿಕಾರಿಗಳಿಗೆ ಕೇಳಿದಾಗ, ಕೆಎಸ್‌ಐಸಿಯಲ್ಲಿ ಇದ್ದ ಎಮ್‌ಡಿ ನೀರಜ್ ರಾಜ್‌ಕುಮಾರ್‌ರವರು ಕಳೆದ ಸಲ ಹೋಗಿ ಬಂದರು. ಸುಮಾರು 3.80 ಲಕ್ಷ ರೂಪಾಯಿಗಳು ಖರ್ಚಾದದ್ದು ನೋಡಿದ್ದೇನೆ. ಹೋದದ್ದು ರೇಷ್ಮೆ ಸೀರೆ ಮಾರುವುದಕ್ಕೆ ಎಂದು ಹೇಳಿದರು. ಮಾರಿರುವುದು 70,000 ರೂಪಾಯಿಗಳಿಗೆ ಮಾತ್ರ ಎಂದು ವರದಿ ಬಂದಿತ್ತು. ನೀರಜ್‌ರಾಜ್‌ಕುಮಾರ್ ದುಬೈಗೆ ಹೋಗಿ ಬಂದ ಖರ್ಚು ಇಲ್ಲಿ ಬರುತ್ತದೆ ಎಂದು ನಾನು ತಿಳಿದಿದ್ದೆ. ಅದು ಇಲ್ಲಿ ಬರಲಿಲ್ಲ. ಹೀಗೆ ಎಷ್ಟೋ ತರಹ ಮಿಸ್ ಆಗಿರಬಹುದು ಎಂಬುದು ನಮ್ಮ ಕಾಳಜಿ. ಏಕೆ ಇನ್‌ಕಂಪ್ಲೀಟ್ ಆಗಿದೆ ಎಂದು ಇಲ್ಲಿ ಹೇಳಬೇಕು. ಸನ್ಮಾನ್ಯ ನಾಯಕರು ಐದು ವರ್ಷಗಳಿಗೆ ಸಂಬಂಧಿಸಿದಂತೆ ಹೇಳಿದರು, ಪ್ರಸ್ತುತ ಸಾಲಿನಲ್ಲಿ ಸಂಪೂರ್ಣವಾದ ವರದಿ ಇಲ್ಲ.

ಶ್ರೀ ಎಸ್.ಎಂ.ಕೃಷ್ಣ: ಕಂಪ್ಲೀಟ್ ವರದಿ ಕೊಡುತ್ತೇವೆ.

ಶ್ರೀ ಜಯಪ್ರಕಾಶ್ ಹೆಗಡೆ: ಮಾನ್ಯ ಮುಖ್ಯ ಮಂತ್ರಿಗಳು ಎಲ್ಲ ಶಾಸಕರಿಗೆ ಏನೇನು ವ್ಯವಸ್ಥೆ ಮಾಡುತ್ತೇವೆಂದು ಹೇಳಿದರು, ಆದರೆ ಒಂದು ರಾಂಗ್ ಸಿಗ್ನಲ್ ಜನತೆಗೆ ಹೋಗಬಾರದು. ಸರ್ಕಾರದ ಖರ್ಚು ಎಂದು ಹೇಳಿದರು. ಅವರವರ ಖರ್ಚಿನಿಂದ ಎಂದು ಅವರ ಮಾತಿನ ಅಭಿಪ್ರಾಯ ನಮಗೆ ಬಂದಿದೆ. ಆದರೆ ಸಾರ್ವಜನಿಕರಿಗೆ

ಹೋಗುವಾಗ ಸರ್ಕಾರದ ಖರ್ಚಿನಲ್ಲಿ ಹೋಗುತ್ತೇವೆಂದು ಅಭಿಪ್ರಾಯ ಬರಬಾರದು.

ಶ್ರೀ ಎಸ್.ಎಸ್.ಪಾಟೀಲ್: ತಮ್ಮ ಆಫೀಸ್‌ನವರು ಕೂಡ ನಮಗೆ ಉತ್ತರ ಕಳುಹಿಸುವಾಗ ಸರಿಯಾಗಿ ಕಳುಹಿಸುವುದಿಲ್ಲ. ಕೆಲವರಿಗೆ ಪೂರ್ಣ ಮಾಹಿತಿ ಬಂದಿದೆ, ಕೆಲವರಿಗೆ ಪೂರ್ಣ ಮಾಹಿತಿ ಬಂದಿಲ್ಲ. ಈ ಪ್ರಶ್ನೆ ಬಗ್ಗೆ ಅವರು ಕಳುಹಿಸಿದ ಮಾಹಿತಿ ಕೆಲವರಿಗೆ ಪೂರ್ಣವಾಗಿ ತಲುಪಿದೆ, ಕೆಲವರಿಗೆ ಪೂರ್ಣವಾಗಿ ತಲುಪಿಲ್ಲ.

ಅಧ್ಯಕ್ಷರು: ನಮಗೆ ಅದಕ್ಕೆ ಸಂಬಂಧವಿಲ್ಲ. ಅವರು ಕಳುಹಿಸಿದ ಮಾಹಿತಿಯನ್ನು ಇವರು ಅಚ್ಚು ಹಾಕಿ ಕಳುಹಿಸುತ್ತಾರೆ. ನಾನು ವೆರಿಫೈ ಮಾಡುತ್ತೇನೆ.

ಶ್ರೀ ಎಸ್.ಎಸ್.ಪಾಟೀಲ್: ನಾವು ಬರುವ ಮೊದಲು ನಮ್ಮ ಆಫೀಸಿಗೆ ಏನು ಕಳುಹಿಸುತ್ತೀರಿ, ವರದಿಯ ಕನ್ನಡ ಕಾಪಿಗಳು ಸಂಪೂರ್ಣವಾಗಿ ಕಳುಹಿಸುವುದಿಲ್ಲ ಅದನ್ನು ಕೂಡ ತಮ್ಮ ಕಛೇರಿಗೆ ತಿಳಿಸಿ.

ಅಧ್ಯಕ್ಷರು: ನಮ್ಮ ಕಛೇರಿಗೆ ಬಂದು ತಿಳಿಸಿ ಇದರ ಬಗ್ಗೆ ಕ್ರಮ ತೆಗೆದಕೊಳ್ಳುತ್ತೇವೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಅಧಿಕಾರಿಗಳ ಕಾಲಂ ಎದುರಿಗೆ ಎಷ್ಟೆಷ್ಟು ಅಮೌಂಟ್ ಖರ್ಚಾಗಿದೆ ಎಂದು ಹೇಳಿದರು, ಒಬ್ಬೊಬ್ಬರೇ ಹೋದರೋ ಅಥವಾ ಫ್ಯಾಮಿಲಿ ಎಲ್ಲ ಹೋದರೋ?

ಅಧ್ಯಕ್ಷರು: ಒಬ್ಬೊಬ್ಬರೇ ಹೋಗಿರುತ್ತಾರೆ.

ಶ್ರೀ ಬಿ.ಹೆಚ್.ಬನ್ನಿಕೋಡ್: ಶಾಸಕರಿಗೆ ವಿದೇಶಗಳಿಗೆ ಹೋಗುವುದಕ್ಕೆ ಅವಕಾಶ ಮಾಡಿಕೊಡುತ್ತೇವೆಂದು ಹೇಳಿದರು. ಸಾರ್ವಜನಿಕರಲ್ಲಿ ತಪ್ಪು ತಿಳುವಳಿಕೆ ಬರಬಾರದು. ಹಿಗಡೆಯವರು ಹೇಳಿದರು, ಶಾಸಕರು ಯಾವ ರೀತಿ, ಯಾವ ವಿಧವಾಗಿ, ಯಾವ ರೀತಿ ನೀತಿ, ಇದೆ ಹಣ ಯಾರು ಖರ್ಚು ಮಾಡುವುದು, ಕೇಂದ್ರ ಸರ್ಕಾರದ್ದು ಎಷ್ಟು ನಿರ್ದಿಷ್ಟವಾಗಿ ಕೆಲವೊಂದು ಅವಶ್ಯಕವಾಗಿರುವಂತಹ ವಿಷಯಗಳ ಬಗ್ಗೆ ಕೆಲವರಿಗೆ ಮಾತ್ರ ಅವಕಾಶ ಮಾಡಿಕೊಡುವುದು ಅಥವಾ ಎಲ್ಲ ಶಾಸನಸಭೆ ಸದಸ್ಯರಿಗೂ ಎಂದು ಸಾರ್ವಜನಿಕರಿಗೆ ತಪ್ಪು ಮಾಹಿತಿ ಹೋಗಬಾರದು ಎಂದು ಈ ವಿಷಯ ಪ್ರಸ್ತಾಪ ಮಾಡಿದ್ದಾರೆ. ನಿರ್ದಿಷ್ಟವಾದ ವಿಚಾರವನ್ನು ಈ ಬಗ್ಗೆ ತಿಳಿಸಬೇಕು.

ಶ್ರೀ ಎಸ್.ಎಂ.ಕೃಷ್ಣ: ಮಾನ್ಯ ಶಾಸನಸಭಾ ಸದಸ್ಯರಿಗೂ ವಿದೇಶ ಪ್ರಯಾಣ ಮಾಡುವುದಕ್ಕೆ ಏನೆಲ್ಲಾ ಸವಲತ್ತುಗಳನ್ನು ಕಲ್ಪಿಸಲಾಗಿದೆ ಎಂದು ವಿವರಣೆ ಕೊಟ್ಟೆ. ಸರ್ಕಾರ ಕಳುಹಿಸಿಕೊಡುತ್ತದೆ ಎಂದು ಹೇಳಲಿಲ್ಲ. ಸುಬ್ಬಾರೆಡ್ಡಿಯವರು ಫ್ಯಾಮಿಲಿ ಬಗ್ಗೆ ವಿಶೇಷವಾದ ಆಸಕ್ತಿ ವಹಿಸಿದ್ದಾರೆ. ಅದರ ಮಾಹಿತಿ ಸಂಗ್ರಹ ಮಾಡಿ

ಕಳುಹಿಸಿಕೊಡುತ್ತೇನೆ.

ಹುಮ್ನಾಬಾದ್ ತಾಲ್ಲೂಕಿನಲ್ಲಿ ಸಬ್‌ಸ್ಟೇಷನ್ ಪ್ರಾರಂಭ

26 (298)

ಶ್ರೀ ಸುಭಾಷ್ ಕಲ್ಲೂರ್ (ಹುಮ್ನಾಬಾದ್): ಮಾನ್ಯ ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿನ ಎಷ್ಟು ಕೆ.ವಿ.ಗಳ ಸಬ್-ಸ್ಟೇಷನ್ನುಗಳನ್ನು ಮಂಜೂರು ಮಾಡಲಾಗಿದೆ? ವಿವರಗಳನ್ನು ನೀಡುವುದು.

ಆ) ಈ ಸಬ್-ಸ್ಟೇಷನ್‌ಗಳು ಯಾವಾಗ ಪ್ರಾರಂಭವಾಗಬೇಕಾಗಿತ್ತು ಮತ್ತು ಯಾವಾಗ ಪೂರ್ಣಗೊಳ್ಳಬೇಕಿತ್ತು? ವಿವರಗಳನ್ನು ನೀಡುವುದು.

ಇ) ಈ ಸಬ್-ಸ್ಟೇಷನ್ಗಳು ಕಾರ್ಯಪ್ರವೃತ್ತವಾಗಿದೆಯೇ? ಆಗದೆ ಇರಲು ಕಾರಣಗಳೇನು? ವಿವರ ನೀಡುವುದು.

ಶ್ರೀ ವೀರಕುಮಾರ್ ಪಾಟೀಲ್ (ಇಂಧನ ರಾಜ್ಯ ಸಚಿವರು):

ಅ) ಕಳೆದ 3 ವರ್ಷಗಳಲ್ಲಿ ಬೀದರ್ ಜಿಲ್ಲೆಯ ಹುಮ್ನಾಬಾದ್ ತಾಲ್ಲೂಕಿಗೆ ಎರಡು-ಮೂರು ಸಬ್-ಸ್ಟೇಷನ್ನುಗಳನ್ನು ಮಂಜೂರು ಮಾಡಲಾಗಿದೆ. ವಿವರಗಳು ಕೆಳಕಂಡಂತಿದೆ.

1. ಮನ್ನೇಕಹಳ್ಳಿಯಲ್ಲಿ 110: 33: 11 ಕೆ.ವಿ. ಸಬ್-ಸ್ಟೇಷನ್.

2. ಛಟ್ ಬೋರಾಲ್ ಗ್ರಾಮದಲ್ಲಿ 33.11 ಕೆ.ವಿ ಸಬ್-ಸ್ಟೇಷನ್.

ಆ ಮತ್ತು ಇ) ಮನ್ನೇಕಹಳ್ಳಿಯ 110: 33:11 ಕೆ.ವಿ.ಸಬ್-ಸ್ಟೇಷನ್ನಿನ ನಿರ್ಮಾಣ ಕಾರ್ಯವನ್ನು ನವೆಂಬರ್ 96ರಲ್ಲಿ ಪ್ರಾರಂಭ ಮಾಡಿ ಡಿಸೆಂಬರ್ 97ರಲ್ಲಿ ಪೂರ್ಣಗೊಳಿಸಿ, ಕಾರ್ಯ ಪ್ರವೃತ್ತಗೊಳಿಸಲಾಯಿತು.

ಛಟ್ ಬೋರಾಲ್ ಗ್ರಾಮದಲ್ಲಿ ಒಂದು 33: 11 ಕೆ.ವಿ.ವಿದ್ಯುತ್ ಸಬ್‌ಸ್ಟೇಷನ್ ನಿರ್ಮಾಣದ ಕಾಮಗಾರಿಯನ್ನು ಪ್ರಸಕ್ತ ವರ್ಷವಾದ 1999-2000ರಲ್ಲಿ ಕೈಗೊಳ್ಳಲು